ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು.)—

ಅ) ರಾಜ್ಯದಲ್ಲಿನ ಅಭಿವೃದ್ಧಿ ಹೊಂದಿದ ಪ್ರದೇಶಗಳಲ್ಲಿ ಯಾವುದೇ ಸವಲತ್ತುಗಳನ್ನು ಕೊಡುತ್ತಿಲ್ಲ. ಹಿಂದುಳಿದ ಪ್ರದೇಶಗಳಲ್ಲಿ ಸಹಾಯ ಧನ ಈ ಕೆಳಕಂಡಂತೆ ಇರುತ್ತದೆ.

೧ ಸಹಾಯಧನ ರೂ. ೨೩,೧೪ ಕೋಟಿ

೨ ಅಭಿವೃದ್ಧಿ ಸಾಲ ಬಾಕಿ ಇರುವುದಿಲ್ಲ.
ಸಹಾಯಧನ ೧೯೮೬–೮೭ ರಿಂದ ಬಾಕಿ ಇದೆ.
ಅಭಿವೃದ್ಧಿಗೆ ಧಕ್ಕೆ ಆಗಿರುವುದು ಕಂಡು ಬಂದಿಲ್ಲ.

ಇ) ಅನ್ವಯಿಸುವುದಿಲ್ಲ.

ಹೇಮಾವತಿ ನೀರನ್ನು ತಿಪ್ಪಗೊಂಡನಹಳ್ಳಿ ಜಲಾಶಯಕ್ಕೆ ತರುವ ಬಗ್ಗೆ.

೧೬೯ ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೇಮಾವತಿ ನೀರನ್ನು ತಿಪ್ಪಗೊಂಡನಹಳ್ಳಿ ಜಲಾಶಯಕ್ಕೆ ಹಾಯಿಸಿ ಬೆಂಗಳೂರಿನ ನಾಗರೀಕರಿಗೆ ಕುಡಿಯುವ ನೀರಿನ ಅನುಕೂಲ ಮಾಡುವ ಯೋಜನೆ ಇದೆಯೇ?

ಆ) ಹಾಗಿದ್ದಲ್ಲಿ ಈ ಯೋಜನೆಯನ್ನು ಎಂದಿನಿಂದ ಕಾರ್ಯಗತ ಮಾಡಲಾಗುವುದು?

ಇ) ಈ ಯೋಜನೆಗೆ ಖರ್ಚಾಗುವ ಅಂದಾಜು ವೆಚ್ಚವೆಷ್ಟು?

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು)—

ಅ) ಬೆಂಗಳೂರು ನಗರಕ್ಕೆ ಹೇಮಾವತಿ ಜಲಾಶಯದಿಂದ ಕುಡಿಯುವ ನೀರನ್ನು ಉಪಯೋಗಿಸುವ ಬಗ್ಗೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ,

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ವಿದ್ಯುತ್ ಬೇಡಿಕೆ ಹಾಗೂ ಉತ್ಪಾದನೆಯ ಪ್ರಮಾಣ

೧೬೦. ಶ್ರೀ ಕೆ. ಲಕ್ಕಣ್ಣ, (ರಾಜಾಜಿನಗರ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಒಟ್ಟು ವಿದ್ಯುತ್ ಉತ್ಪಾದನೆಯ ಪ್ರಮಾಣವೆಷ್ಟು ;

ಆ) ರಾಜ್ಯದ ವಿದ್ಯುತ್ ಬೇಡಿಕೆ ಪ್ರಮಾಣವೆಷ್ಟು ಹಾಗೂ ಬೇಡಿಕೆ ಹೆಚ್ಚಾಗಿದ್ದಲ್ಲಿ ಇದನ್ನು ಪೂರೈಸಲು ಕ್ರಮ ಕೈಗೊಳ್ಳಲಾಗಿದೆಯೇ ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು).—

ಅ) ಈಗ ರಾಜ್ಯದಲ್ಲಿ ಜಲ ವಿದ್ಯುತ್ ಸ್ಥಾವರಗಳ ಸ್ಥಾಪಿತ ಸಾಮರ್ಥ್ಯ ೨೨೨೫.೨೦ ಮೆಗಾವಾಟ್ಸ್ ಮತ್ತು ವಾರ್ಷಿಕ ವಿದ್ಯುತ್ ಉತ್ಪಾದನೆ ೯೬೮೫ ದಶಲಕ್ಷ ಯೂನಿಟ್‌ಗಳು, ಶಾಖೋತ್ಪನ್ನ ಕೇಂದ್ರದ ಸ್ಥಾಪಿತ ಸಾಮರ್ಥ್ಯ ೪೨೦ ಮೆಗಾವಾಟ್ಸ್ ಮತ್ತು ವಾರ್ಷಿಕ ವಿದ್ಯುತ್ ಉತ್ಪಾದನೆ ೨೩೦೦ ದಶಲಕ್ಷ ಯೂನಿಟ್‌ಗಳು.

ಆ) ರಾಜ್ಯದಲ್ಲಿ ಸದ್ಯಕ್ಕೆ ೨೦೪೦೧ ದಶಲಕ್ಷ ಯೂನಿಟ್ ವಿದ್ಯುಚ್ಛಕ್ತಿ ಬೇಡಿಕೆ ಇದೆ. ವಿದ್ಯುತ್ ಕೊರತೆಯನ್ನು ನೀಗಿಸಲು ರಾಜ್ಯ ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

೧) ಹೆಚ್ಚು ಜಲ ಹಾಗೂ ಶಾಖೋತ್ಪನ್ನ ವಿದ್ಯುತ್ ಕೇಂದ್ರ ಸ್ಥಾಪಿಸುವ ಯೋಜನೆಯೊಂದನ್ನು ಪಾಕಿಕೊಂಡಿದೆ.

೨) ಕೇಂದ್ರ ಸರ್ಕಾರದ ಯೋಜನೆಗಳಿಂದ ರಾಜ್ಯದ ಪಾಲನ್ನು ಪಡೆಯುವುದು.

೩) ಅಗತ್ಯವಿರುವಾಗ ಮಹಾರಾಷ್ಟ್ರ ಮತ್ತು ನೆರೆ ರಾಜ್ಯಗಳಿಂದ ವಿದ್ಯುತ್ತನ್ನು ಆಮದು ಮಾಡಿಕೊಳ್ಳುವುದು.